
# ಭಿಕ್ಷುಕನ ಹೃದಯವಂತಿಕೆ

ಮೂಲ ಹಿಂದೀ: **ಸ್ವಾಮಿ ಜಪಾನಂದ** ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

ಕಿಷ್ಕಿಂಧೆ ಒಂದು ಐತಿಹಾಸಿಕ ಸ್ಥಳ... ವಾಲಿ ಸುಗ್ರೀವರ ರಾಜ್ಯವಾಗಿದ್ದ ಸ್ಥಳ.... ರಾಮ ಲಕ್ಷ್ಮಣರು ತಂಗಿದ್ದ ಪಾವನ ಸ್ಥಳ.... ಶ್ರೀ ಹನುಮಂತನು ಸೀತಾಮಾತೆಯನ್ನು ಕಂಡ ಮೇಲೆ ರಾಮನನ್ನು ಭೇಟಿಯಾದ ಪುಣ್ಯಸ್ಥಳ... ಇಲ್ಲಿಂದಲೇ ಶ್ರೀ ರಾಮನು ವಾನರಸೇನೆಯೊಂದಿಗೆ ಲಂಕೆಯ ಮೇಲೆ ದಾಳಿ ಮಾಡಿ ಸೀತೆಯನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದದ್ದು.

ಈ ಪವಿತ್ರ ಸ್ಥಾನದ ದರ್ಶನಕ್ಕೋಸ್ಕರ ಒಮ್ಮೆ ಪರಿವ್ರಾಜಕ ಸಂನ್ಯಾಸಿ ಅಲೆದಾಡುತ್ತಾ ಇಲ್ಲಿಗೆ ಬಂದನು. ನೋಡಿ ಮನಸ್ಸು ತುಂಬಿಹೋಯಿತು. ಪರ್ವತಶ್ರೇಣಿಗಳಿಂದ ಆವೃತವಾಗಿರುವ ಸುಂದರ ಪ್ರದೇಶ, ಜೀರ್ಣಾವಸ್ಥೆಯಲ್ಲಿದ್ದ ಒಂದು ಪ್ರಾಚೀನ ಮಂದಿರ... ಆದರೆ ರಾಮಾಯಣದ ಕಿಷ್ಕಿಂಧಾ ಪ್ರಸಂಗ ನೆನಪಾದ ಕೂಡಲೇ ಆ ಸ್ಥಾನದ ಹಿರಿಮೆಯ ಅನುಭವವಾಗ ತೊಡಗಿತು. ಕಣ್ಣ ಮುಂದೆ ಪ್ರತ್ಯಕ್ಷವಾಗಿ ಕಿಷ್ಕಿಂಧಾಕಾಂಡದ ಸಚಿತ್ರ ವಿವರಗಳು ನಡೆಯುತ್ತಿವೆಯೋ ಏನೋ ಎಂಬಂತೆ ಭಾಸ ವಾಯಿತು. ಅಲ್ಲಿ ಅನುಭವಗಳಂತೂ ಬಹಳಷ್ಟು ಬಾರಿ ಆದವು, ಆದರೆ ಈ ಸ್ಥಾನದಲ್ಲಿ ಮಾನವತೆಯ ಒಂದು ಅಪರೂಪದ ದೃಷ್ಟಾಂತದ ಅನುಭವವಾಯಿತು.

ಅಲ್ಲಿಂದ ಚಕ್ರತೀರ್ಥ ಸಮೀಪವಿದೆ. ಮಾರನೇ ದಿನವೇ ಸಂನ್ಯಾಸಿಯು ಕಾಡಿನ ಮಾರ್ಗವಾಗಿ ಅಲ್ಲಿಗೆ ಬಂದು ತಲುಪಿದ. ಒಂದು ರಾತ್ರಿ ಕಿಷ್ಕಿಂಧೆಯಲ್ಲಿ ಉಳಿದ ಮತ್ತು ಬೆಳಿಗ್ಗೆಯೇ ಮಾತಂಗ ಪರ್ವತದ ದರ್ಶನ ಮಾಡಲು ಬಂದ. ಅಲ್ಲಿ ಆಗಲೇ ಯಾರೋ ತಾಜಾ ತೆಂಗಿನಕಾಯಿಯನ್ನು ಇಟ್ಟಿದ್ದರು. ಹಸಿವಾ ಗಿತ್ತು, ಹಾಗಾಗಿ ಅನಾಯಾಸವಾಗಿ ಪ್ರಸಾದವೆಂದು ತೆಂಗಿನ ಕಾಯಿ ಸಿಕ್ಕಿದ ಖುಷಿಯಲ್ಲಿ ಅದನ್ನು ತಿಂದು ಮುಗಿಸಿದ. ಮಧ್ಯಾಹ್ನ ಚಕ್ರತೀರ್ಥಕ್ಕೆ ಬಂದು ತಲುಪಿದ. ಸ್ವಚ್ಛ ನೀರು ಅರ್ಧಚಂದ್ರಾಕಾರವಾಗಿ ಸುತ್ತುತ್ತಿದ್ದ ನದಿಯಲ್ಲಿ ಚೆನ್ನಾಗಿ ಸ್ನಾನ ಮಾಡಿದ. ಮನೋಹರವಾದ ಪ್ರದೇಶವದು. ಎದುರಿಗೆ ನೀಲ ಪರ್ವತವನ್ನು ಚಕ್ರಾಕಾರದಲ್ಲಿ ಬಳಸಿ, ಅತಿ ವೇಗದಿಂದ ಹರಿಯು ತ್ತಿದ್ದ ನದಿಯು ಮಳೆಯ ರಭಸದಿಂದ ಪೂರಾ ಭರ್ತಿಯಾಗಿತ್ತು. ಅಕ್ಕಪಕ್ಕದಲ್ಲಿ ಕಾಡೇ ಕಾಡು. ಹಿಂದೊಮ್ಮೆ ಇದು ಮಹಾ ಸಾಮ್ರಾಜ್ಯ ವಿಜಯನಗರದ ರಾಜಧಾನಿಯಾಗಿತ್ತು. ಈಗ ಹಂಪಿ ಎಂದು ಪ್ರಸಿದ್ಧವಾಗಿದೆ. ಶ್ರೀ ಹಂಪೀಶ್ವರ ಮಹಾದೇವನ ಒಂದು



ವಿಶಾಲ ಮಂದಿರವಿದೆ. ಈ ಚಕ್ರತೀರ್ಥ ಪ್ರಸಿದ್ಧ ಶೈವ ತೀರ್ಥಯಾತ್ರಾ ಸ್ಥಳವಾಗಿದೆ.

ಸಂನ್ಯಾಸಿಯು ಸ್ನಾನ ಮಾಡಿ ಒಂದು ವಿಶಾಲವಾದ ಬಂಡೆಯ ಮೇಲೆ ಕುಳಿತು, ಅಲ್ಲಿನ ಮನೋಹರವಾದ ದೃಶ್ಯವನ್ನು ನೋಡು ತ್ತಿದ್ದ. ಹಾಗೆಯೇ ಮನದಲ್ಲಿ ಪ್ರಶ್ನೆಗಳು ಏಳುತ್ತಿದ್ದವು.... ಇತಿ ಹಾಸದ ಪುಟಗಳಲ್ಲಿ ವಿಜಯನಗರದ ಸಾಮ್ರಾಜ್ಯದ ಉತ್ಥಾನ ಮತ್ತು ವಿನಾಶ ಹೇಗೆ ಆಯಿತು? ಯಾಕೆ ಆಯಿತು? ಮತ್ತು ನಾವು ಭಾರತೀಯರು ಅದರಿಂದ ಏನಾದರೂ ಪಾಠ ಕಲಿತಿ ದ್ದೇವೆಯೆ? ಇತ್ಯಾದಿ ಇತ್ಯಾದಿ...

ಒಬ್ಬ ಸೌಮ್ಯವಾದ ವೃದ್ಧೆಯು ಬಂದಳು ಮತ್ತು ಅವನ ಮುಂದೆ ತೆಂಗಿನಕಾಯಿ ಇಟ್ಟು, ತನ್ನ ಭಾಷೆಯಲ್ಲಿ ಏನನ್ನೋ ಹೇಳುತ್ತಿದ್ದಳು. ಸಂನ್ಯಾಸಿಗಂತೂ ಒಂದೆರಡು ಶಬ್ದಗಳು ಮಾತ್ರ ಅರ್ಥವಾದವು, ಬಾಕಿ ಎಲ್ಲಾ ಶೂನ್ಯವೇ. ಅವನು ಹಿಂದಿಯಲ್ಲಿ ಅವಳಿಗೆ ಆಶೀರ್ವಚನ ಮಾಡಿದ. ಆದರೆ ವೃದ್ಧೆಗೆ ಬಹುಶಃ ಏನೂ ಅರ್ಥವಾಗಲಿಲ್ಲ. ಅವಳು ಸಾಷ್ಟಾಂಗ ಪ್ರಣಾಮ ಮಾಡಿ ಹೊರಟೇ ಹೋದಳು. ಈಗ ಹಸಿವಂತೂ ಆಗಿತ್ತು. ಅನಾಯಾಸ ವಾಗಿ ಮತ್ತೆ ತೆಂಗಿನಕಾಯಿ ಸಿಕ್ಕಿದೆಯೆಂದು ಅದನ್ನೇ ತಿಂದು, ಹಸಿವು ನೀರಡಿಕೆಯನ್ನು ನಿವಾರಿಸಿಕೊಳ್ಳುವ ವಿಚಾರ ಮಾಡಿ ಅದನ್ನು ಪೂರ್ತಿಯಾಗಿ ತಿಂದುಬಿಟ್ಟ. ಅದು ಬಿಟ್ಟರೆ ಬೇರೆ ಏನೂ ಉಪಾಯ ಇರಲಿಲ್ಲ ತಾನೆ? ಗೃಹಸ್ಥನ ಮನೆಗೆ ಹೋಗಿ ಭಿಕ್ಷೆ ಯಾಚಿಸಲೂ ಸಾಧ್ಯವಿಲ್ಲ, ಆಕಾಶ ವೃತ್ತಿಯಲ್ಲೇ ಸ್ಥಿತನಾಗಿದ್ದ.

ಆದರೆ ಎರಡು ಹೊತ್ತಿಗೂ ಆಹಾರ ರೂಪದಲ್ಲಿ ತಿಂದ ತೆಂಗಿನಕಾಯಿ ಹೊಟ್ಟೆಯನ್ನು ಬಹಳಷ್ಟು ಗಡಬಡಾಯಿಸಿತು. ಮೊದಲಿಗೆ ಹೊಟ್ಟೆಯಲ್ಲಿ ನೋವು ಬಂದು, ನಂತರ ಭೇದಿಯಾಗಲು ಪ್ರಾರಂಭವಾಯಿತು. ಸಂಜೆಯ ಹೊತ್ತಿಗೆ ಅತಿಸಾರದಂತೆ ಆಗಲು ಶುರುವಾಯಿತು. ಈಗ ಚಕ್ರತೀರ್ಥದಲ್ಲಿ ಉಳಿಯುವ ಆಲೋಚನೆಯನ್ನು ಬಿಟ್ಟು, ಅವನು ಹೊಸಪೇಟೆಯ ಕಡೆಗೆ ಹೊರಟ. ಅಲ್ಲಿ ಏನಾದರೂ ಚಿಕಿತ್ಸೆಯ ವ್ಯವಸ್ಥೆ ಸಿಗಬಹುದೇನೋ ಎಂಬ ದೃಷ್ಟಿಯಿಂದ. ಆದರೆ ದಾರಿಯುದ್ದಕ್ಕೂ ಆದ ಅತಿಸಾರದಿಂದ ಬಹಳ ಯೋಚನೆಗೆ ಇಟ್ಟುಕೊಂಡಿತು. ರಾತ್ರಿ ಹೊತ್ತಿಗೆ ಹೊಸಪೇಟೆಗೆ ತಲುಪಿದ. ಆದರೆ ಅಷ್ಟು ಹೊತ್ತಿಗೆ ಸಮಸ್ಯೆ ಎಷ್ಟಾಯಿತೆಂದರೆ, ಅಲ್ಲಿ ಇಲ್ಲಿ ಓಡಾಡಲೂ ಸಾಧ್ಯವಿಲ್ಲದಂತಾಯಿತು. ಹೊರಗೆ ರಸ್ತೆಯ ಹತ್ತಿರ ಒಬ್ಬ ಲಿಂಗಾಯಿತ ಧರ್ಮಶಾಲೆಯ ಹಿಂದೆ ಒಂದು ಚಪ್ಪರದಲ್ಲಿ ಜಾಗ ಸಿಕ್ಕಿತು. ಅಲ್ಲಿ ಯಾರೂ ಇರಲಿಲ್ಲವಾದ ಕಾರಣ ಒಳ್ಳೆಯದಾಯಿತು.

ಎದುರಿಗೆ ಅಂಗಳದಲ್ಲಿ ಒಂದು ಕೊಳವಿತ್ತು, ಸುತ್ತ ಕಾಡಿತ್ತು. ಹಾಗಾಗಿ ಸಿಕ್ಕಿದ ಈ ವ್ಯವಸ್ಥೆಯ ಬಗ್ಗೆ ಅವನಿಗೆ ನಿಶ್ಚಿಂತೆಯಾಯಿತು. ಆದರೆ ರಾತ್ರಿ ಇಡೀ ಅತಿಸಾರವಾಗಿ ಅವನು ಬಹಳ ನಿಶಕ್ತನಾದ. ಬೆಳಿಗ್ಗೆಯಂತೂ ರಕ್ತವೇ ಭೇದಿಯಾಗುತ್ತಿತ್ತು. ಎಷ್ಟು ನಿಶ್ಶಕ್ತಿಯಾಗಿತ್ತೆಂದರೆ ಪಾಯಿಖಾನೆಗೂ ಬಹಳವೇ ಕಷ್ಟದಿಂದ ಹೋಗಬೇಕಾಗಿತ್ತು. ತಲೆತಿರುಗುವಿಕೆ ಬಂದಂತಾಯಿತು. ಆದರೆ ಯಾರೂ ಸಹಾಯಕರಿಲ್ಲದಿದ್ದ ಕಾರಣ ಸುಮ್ಮನೇ ಬಿದ್ದುಕೊಂಡಿರುವ ಹೊರತಾಗಿ ಏನೂ ಮಾಡಲು ಸಾಧ್ಯವಿರಲಿಲ್ಲ.

ಸಂಜೆಯಲ್ಲಿ ಸಾರಂಗಿ ಊದುತ್ತಾ ಭಿಕ್ಷಾಟನೆ ಮಾಡುತ್ತಾ ಗ್ವಾಲಿಯರ್ ಕಡೆಯ ಒಬ್ಬ ವ್ಯಕ್ತಿ ಅಲ್ಲಿಗೆ ಬಂದ. ಸಂನ್ಯಾಸಿಯನ್ನು ಕಂಡು ಬಹಳ ಖುಷಿಪಟ್ಟು, ''ಆಹಾ.. ನಿಮ್ಮ ಸತ್ಸಂಗದಿಂದ ಈ ರಾತ್ರಿ ಚೆನ್ನಾಗಿ ಕಳೆಯುತ್ತದೆ'' ಎಂದ. ಆದರೆ ಸಂನ್ಯಾಸಿಯು ಬಾರಿಬಾರಿಗೂ ಪಾಯಿಖಾನೆಗೆ ಹೋಗುತ್ತಿದ್ದುದನ್ನು ಗಮನಿಸಿ, ಅವನೂ ಚಿಂತಿತನಾಗಿ, ''ಅಯ್ಯೋ ಈ ಸಮಸ್ಯೆ ಯಾವಾಗ ಶುರುವಾಯಿತು? ಯಾವಾಗ ಇಲ್ಲಿಗೆ ಬಂದಿರಿ? ಔಷಧಿ ತೆಗೆದುಕೊಂಡಿದ್ದೀರೋ ಇಲ್ಲವೊ?'' ಎಂದು ಪ್ರಶ್ನಿಸಿದ. ಎಲ್ಲಾ ವಿವರಗಳನ್ನು ತಿಳಿದ ಮೇಲೆ ಅವನು ಹೇಳಿದ, ''ನಾಳೆ ಬೆಳಿಗ್ಗೆಯ ಹೊತ್ತಿಗೆ ಸರಿ ಹೋಗುತ್ತದೆ. ಇಲ್ಲಿ ಅನ್ನ ಸಿಗದಿದ್ದ ಕಾರಣ ಹೀಗಾಗಿದೆ. ಎಲ್ಲವೂ ಆ ತೆಂಗಿನಕಾಯಿಯ ಪ್ರತಾಪ. ನಾನು ನಾಳೆ ಬೇಗ ಅನ್ನ ಮಾಡಿ ನಿಮಗೆ ಕೊಟ್ಟು, ನಂತರ ಭಿಕ್ಷಾಟನೆಗೆ ಹೊರಡುವೆ. ನೀವೇನೂ ಗಾಬರಿಯಾಗಬೇಡಿ'' ಎಂದ. ರಾತ್ರಿಯಿಡೀ ರಕ್ತಭೇದಿ ಆಗುತ್ತಿತ್ತು. ಬೆಳಿಗ್ಗೆ ಅವನು ಬೇಗನೇ ಸ್ನಾನ ಮಾಡಿ, ಅನ್ನ ಮಾಡಿ, ಕೆಂಪು ಮೆಣಸಿನಕಾಯಿಗೆ ತುಂಬ ತುಪ್ಪ ಹಾಕಿ, ಅದರ ರಸವನ್ನು ಮಾಡಿ ಅನ್ನಕ್ಕೆ ಬಡಿಸಿದ. ಸಂನ್ಯಾಸಿಯು ಕೆಂಪು ಮೆಣಸಿನ ಕಾಯಿಯನ್ನು ನೋಡಿ ಯೋಚಿಸತೊಡಗಿದ – 'ಓ ಇದೇ ನನ್ನ ಕೊನೆಯ ಅಂತಿಮ ಆಹಾರ.. ಜೈ ಭಗವಾನ್!' ಎಂದೆನ್ನುತ್ತಾ ಆ ಅನ್ನವನ್ನು ತಿಂದ. ಭಿಕ್ಷುಕನೂ ಸ್ವಲ್ಪ ಅನ್ನ ತಿಂದು ಭಿಕ್ಷಾಟನೆಗೆ ಹೋಗಿಬಿಟ್ಟ.

ಮತ್ತೆ ನಾಲ್ಕೈದು ಸಲ ಜೋರಾಗಿ ರಕ್ತ ಭೇದಿಯಾಯಿತು. ಆದರೆ ನಂತರ ರಕ್ತ ಹೋಗುವುದು ಕಮ್ಮಿಯಾಯಿತು ಮತ್ತು ಪಾಯಿಖಾನೆಯ ಭೇಟಿಯೂ ಕಮ್ಮಿಯಾಯಿತು. ಏನಾಶ್ಚರ್ಯ... ಸಂಜೆಯ ಹೊತ್ತಿಗಂತೂ ರಕ್ತಭೇದಿ ಸಂಪೂರ್ಣವಾಗಿ ನಿಂತಿತು. ಆಮಶಂಕೆಯೂ ಕಡಿಮೆಯಾಯಿತು. ದೇಹದಲ್ಲಿ ಸ್ವಲ್ಪ ಶಕ್ತಿ ತುಂಬಿತು. ಭಿಕ್ಷುಕನು ಮೊಸರು ತಂದ, ಹಾಗೇ ಬರುವಾಗ ಸಂನ್ಯಾಸಿಯ ಸಮಸ್ಯೆಯನ್ನು ಹೇಳಿ ಯಾವುದೋ ವೈದ್ಯರಿಂದ ಔಷಧಿಯನ್ನೂ ಹೊತ್ತು ತಂದಿದ್ದ. ರಾತ್ರಿಯಲ್ಲಿ ಅವನು ಮತ್ತೆ ತುಪ್ಪದೊಂದಿಗೆ ಮೊಸರನ್ನ ಮಾಡಿ ತಿನ್ನಿಸಿದ. ಬೆಳಿಗ್ಗೆಯ ಹೊತ್ತಿಗೆ ಅತಿಸಾರವು ಹೇಳಹೆಸರಿಲ್ಲದಂತೆ ಮಾಯವಾಯಿತು.

ಮಾರನೇ ದಿನವೂ ಮತ್ತೆ ಮೊಸರನ್ನ ನೀಡಿ ಭಿಕ್ಷಾಟನೆಗೆ ಹೋದ. ದಿನವಿಡೀ ಸಂನ್ಯಾಸಿಯು ಆರಾಮವಾಗಿದ್ದ. ಸಂಜೆಗೆ ಭಿಕ್ಷುಕನು ಒಬ್ಬ ಸಜ್ಜನರನ್ನು ಜೊತೆಗೆ ಕರೆದುಕೊಂಡು ಬಂದ. ಅವನು, ''ಬಳ್ಳಾರಿ ಒಳ್ಳೆಯ ಜಾಗ. ಅಲ್ಲಿ ಹೋದರೆ ನಿಮಗೆ ಒಳ್ಳೆಯದಾಗುತ್ತದೆ'' ಎಂದು ಹೇಳಿ, ಅವನೇ ಟಿಕೆಟ್ ಖರೀದಿಸಿದ. ಭಿಕ್ಷುಕನು ರೈಲ್ವೇ ಸ್ಟೇಷನ್‌ವರೆಗೆ ಹೋಗಿ ಸಂನ್ಯಾಸಿಯನ್ನು ರೈಲುಗಾಡಿಯಲ್ಲಿ ಕೂರಿಸಿ ಬಹಳ ಪ್ರೀತಿಯಿಂದ ವಿದಾಯ ಹೇಳಿದ.

ಸಂನ್ಯಾಸಿಯು ಆಭಾರಿಯಾಗಿ ವಿದಾಯ ಹೇಳುತ್ತಾ ಯೋಚಿಸುತ್ತಾ, 'ಈ ಭಿಕ್ಷುಕನ ಹೃದಯದಲ್ಲೂ ಮಾನವತೆಯ ಸುಂದರ ಹೂ ಅರಳಿದೆಯಲ್ಲ, ನಿಜಕ್ಕೂ ಇದು ಧನ್ಯತೆಯೇ ಸರಿ.' ಎಂದು ಉದ್ಗರಿಸಿದ. ❃

## ಆತ್ಮಸಾಕ್ಷಾತ್ಕಾರದ ವಿಧಾನ

**ಸ್ವರ್ಣಂ ಯಥಾ ಗ್ರಾವಸು ಹೇಮಕಾರಃ**
**ಕ್ಷೇತ್ರೇಷು ಯೋಗೈಸ್ತದಭಿಜ್ಞ ಆಪ್ನುಯಾತ್ ।**
**ಕ್ಷೇತ್ರೇಷು ದೇಹೇಷು ತಥಾऽऽತ್ಮಯೋಗೈಃ**
**ಅಧ್ಯಾತ್ಮವಿದ್ ಬ್ರಹ್ಮಗತಿಂ ಲಭೇತ ॥**

ಅಕ್ಕಸಾಲಿಗನು ಕಲ್ಲುಗಳೊಂದಿಗೆ ಬೆರೆತಿರುವ ಚಿನ್ನವನ್ನು ಅನೇಕ ಕ್ರಿಯೆಗಳಿಂದ ಶುದ್ಧೀಕರಿಸಿ ಪಡೆದುಕೊಳ್ಳುತ್ತಾನೆ. ಅದೇ ರೀತಿ ಅಧ್ಯಾತ್ಮ ತತ್ತ್ವವನ್ನರಿತ ಜ್ಞಾನಿಯು ಆತ್ಮಪ್ರಾಪ್ತಿಯ ಉಪಾಯಗಳಿಂದ ದೇಹವೆಂಬ ಕ್ಷೇತ್ರದಲ್ಲೇ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

*(ಭಾಗವತ, ೭.೭.೨೧)*